ಸಹಾಯ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಈಗ ನಾನು ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನವರಾಗಲೀ, ಹೋಂ ಡಿಪಾರ್ಟ್‌ಮೆಂಟ್‌ನವರಾಗಲಿ ಅವರು ಜನಗಳಿಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡಬೇಕು. ಟ್ರಾಫಿಕ್ ಮೊಬೈಲ್ ಕೋರ್ಟ್ಸ್ ಮುಂದೆ ಬೆಂಗಳೂರಿನಲ್ಲಿತ್ತು. ಇದನ್ನು ತೆಗೆಯಲು ಯಾವ ಕಾನೂನಿನ ಅಡಚಣೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಏಕೆಂದರೆ ಅಲ್ಲಿ ಒಬ್ಬರು ಮ್ಯಾಜಿಸ್ಟ್ರೇಟ್ ಮತ್ತು ಒಬ್ಬರು ಪೋಲೀಸ್ ಇನ್‌ಸ್ಪೆಕ್ಟರ್ ಇರುವರು, ಇಲ್ಲವೇ ಸಬ್‌ಇನ್ಸ್‌ಪೆಕ್ಟರ್ ಇರುವರು. ಅವರು ಫೈನ್ ಕಲೆಕ್ಟ್ ಮಾಡುತ್ತಿದ್ದರು. ಅದು ಸ್ಮೂತ್ ಆಗಿ ನಡೆಯುತ್ತಿತ್ತು. ಇದರೊಳಗೆ ಕಾನೂನಿನ ಅಡಚಣೆ ಏನೂ ಇಲ್ಲ ಅಂತ ಕಾಣುತ್ತದೆ. ಅದೇ ಮ್ಯಾಜಿಸ್ಟ್ರೇಟ್ ಅವರು ಈಗ ಒಂದು ಬಿಲ್ಡಿಂಗ್‌ನಲ್ಲಿ ಕುಳಿತುಕೊಂಡು ದಂಡ ವಸೂಲಿ ಮಾಡುತ್ತಿದ್ದಾರೆ. ಮೊಬೈಲ್ ವ್ಯಾನಿನಲ್ಲಿ ಕುಳಿತುಕೊಂಡು ವಸೂಲು ಮಾಡಲು ಕಾನೂನಿನ ಅಡಚಣೆ ಬರುವುದೆಂದು ನನಗಂತೂ ತೋಚಲಿಲ್ಲ. ತಾವು ಇದನ್ನು ಸ್ವಲ್ಪ ತಮ್ಮ ಡಿಪಾರ್ಟ್‌ಮೆಂಟ್‌ನಿಂದ ಮೂವ್ ಮಾಡಿ, ಹೋಂ ಡಿಪಾರ್ಟ್‌ಮೆಂಟ್ ಆಗಲಿ, ಅಥವಾ ಬೇರೆ ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಾಗಲಿ, ಅವರನ್ನು ಕೇಳಿಬಿಟ್ಟು ಮೊಬೈಲ್ ಕೋರ್ಟ್ಸ್ ಅನ್ನು ಮತ್ತೆ ಜಾರಿಗೆ ತರಬೇಕು ಮತ್ತು ಎಲ್ಲಾ ಸರ್ಕಲ್‌ಗಳಲ್ಲಿಯೂ ಯಾವ್ಯಾವ ಅಫೆನ್ಸ್‌ಗೆ ಎಷ್ಟೆಷ್ಟು ಫೈನ್ ಅಂತ ತಾವು ಬೋರ್ಡ್‌ಗಳನ್ನು ಹಾಕಿಸುವುದಕ್ಕೆ ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ವಿಷಯ:- ಆಂಗ್ಲ ಮಾಧ್ಯಮ ಶಾಲೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 430 (2310)

ಶ್ರೀ ಟಿ.ಜಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಡಿ. ಕೆ. ನಾರಾಯಣ ಭಟ್ಟ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಹೆಸರಿನಲ್ಲಿ ಖೋಟಾ ಮೊಹರುಗಳನ್ನು ಸೃಷ್ಟಿಸಿ ರಾಜ್ಯದಲ್ಲಿ ನೂರಾರು ಆಂಗ್ಲ ಪಾಠಶಾಲೆಗಳನ್ನು ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಸದರಿ ಅವರ ಖೋಟಾ ಹೆಸರಿನ ಅನೇಕ ಮಾಹಿತಿಗಳನ್ನು ಹೊರಡಿಸಲು ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಇ ಶಿಕ್ಷಣ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಮೀಲಾಗಿ ಈ ಖೋಟಾ ದಾಖಲೆಗಳನ್ನು ಸೃಷ್ಟಿಸುವ ಒಂದು ಜಾಲವೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ ಈ ಖೋಟಾ ದಾಖಲೆಯಿಂದ ಅನೇಕ ಆಂಗ್ಲ ಶಾಲೆಗಳಿಗೆ ಅನುಮತಿ ನೀಡಿ ನಡೆಸುತ್ತಿರುವುದು ತಿಳಿದಿದೆಯೇ? ಹಾಗಿದ್ದಲ್ಲಿ ಈ ಶಾಲೆಗಳಾವುವು ? ಶಾಲೆಗಳ ವಿವರ ಮತ್ತು ಸ್ಥಳದ ವಿವರ ಒದಗಿಸುವುದು.

ಉ ಈ ಖೋಟಾ ಜಾಲಕ್ಕೆ ಶಾಮೀಲಾದ ಅಧಿಕಾರಿಗಳು ಯಾರು ಯಾರು, ಅವರುಗಳ ಮೇಲೆ ಕೈಗೊಂಡ ಶಿಸ್ತಿನ ಕ್ರಮವೇನು? ಹೆಸರು, ಹುದ್ದೆ. ಇಲಾಖೆಯ ಪ್ರತ್ಯೇಕ ವಿವರ ನೀಡುವುದು ?

ಊ ಈ ಖೋಟಾ ಸಹಿಯಿಂದ ಅನುಮತಿ ಪಡೆದಿರುವ ಆಂಗ್ಲ ಶಾಲೆಗಳ ಪರವಾನಿಗೆಯನ್ನು ರದ್ದುಪಡಿಸದಿರಲು ಕಾರಣವೇನು ? ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು ?

ಶ್ರೀ ಎಂ.ವೀರಪ್ಪಮೊಯಿಲಿ, (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)-

ಅ ಬಂದಿದೆ.

ಆ ಇಲ್ಲ.

ಇ ಇಲ್ಲ.

ಈ ಈ ಬಗ್ಗೆ ಇಲಾಖೆ ಮಟ್ಟದ ಪ್ರಥಮ ಹಂತದ ತಪಾಸಣೆ: ವಿಚಾರಣೆ ಮಾಡಲಾಗುತ್ತಿದೆ.

ಉ ಈ ಬಗ್ಗೆ ವಿಚಾಣೆ ಅಂತಿಮಗೊಳಿಸಿಲ್ಲವಾದ್ದರಿಂದ ಈ ಹಂತದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ ಈ ಬಗ್ಗೆ ತನಿಖೆ ಅಂತ್ಯಗೊಳಿಸಿದ ನಂತರ ಅಂತಹ ಶಾಲೆಗಳ ವಿರುದ್ಧ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರಿ ಟಿ.ಜಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ನಾನು ನಾರಾಯಣ ಭಟ್ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಹೆಸರಿನಲ್ಲಿ ಜೋಟಾ ಮೊಹರನ್ನು ಸೃಷ್ಟಿಸಿ ರಾಜ್ಯದಲ್ಲಿ ನೂರಾರು ಆಂಗ್ಲ ಪಾಠಶಾಲೆಗಳನ್ನು ತೆಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ ಅಂತ ಕೇಳಿದ್ದಕ್ಕೆ "ಹೌದು" ಎಂದು ಹೇಳಿದ್ದಾರೆ. ಇದರಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ಗೊತ್ತೇ ಎಂದು ಕೇಳಿದ್ದಕ್ಕೆ "ಇಲ್ಲ" ಎಂದು ಹೇಳಿದ್ದಾರೆ. ಇದನ್ನು ಸೃಷ್ಟಿಸುವ ಜಾಲ ಇದೆಯೇ ಎಂದು ಕೇಳಿದ್ದಕ್ಕೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಈ ಜೋಟಾ ದಾಖಲೆಯಿಂದ ಆಂಗ್ಲ ಶಾಲೆಗಳಿಗೆ ಅನುಮತಿ ನೀಡುತ್ತಿರುವುದು ತಿಳಿದಿದೆಯೇ ಎಂದು ಕೇಳಿದ್ದಕ್ಕೆ ಈ ಬಗ್ಗೆ ಪ್ರಥಮ ಹಂತದ ತಪಾಸಣೆಯನ್ನು ಮಾಡಲಾಗುತ್ತಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ನಾನು ತಮ್ಮ ಮುಖೇನ ಅವರಿಗೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಏನೆಂದರೆ ಈ ಇಲಾಖೆ ಬಹಳ ದೊಡ್ಡದಾದಂತಹ ಇಲಾಖೆ. ಈ ಇಲಾಖೆಯಲ್ಲಿ ನನಗೆ ಜ್ಞಾಪಕ ಬರುವ ರೀತಿಯಲ್ಲಿ ದಿ:ಶಂಕರೇಗೌಡರನ್ನು ಬಿಟ್ಟರೆ ಈ ಇಲಾಖೆಯ ಆಡಳಿತವನ್ನು ಉತ್ತಮ ಮಾಡಲಿಕ್ಕೆ ಪ್ರಯತ್ನ ಪಟ್ಟಂತಹ ಮಂತ್ರಿಗಳು ಅಂದರೆ ಶ್ರಿಮಾನ್ ವೀರಪ್ಪಮೊಯಿಲಿಯವರು ಅನ್ನತಕ್ಕ ಮಾತನ್ನು ನಾನು ಒಪ್ಪುತ್ತೇನೆ. ಇದು ಆಗಿರತಕ್ಕದ್ದು ಇವರ ಕಾಲದಲ್ಲಿ ಅಲ್ಲ, ಇದು ಹಿಂದೆ ಆಗಿರತಕ್ಕದ್ದು. ಹಿಂದೆ ಆಗಿರತಕ್ಕದ್ದರ ಬಗ್ಗೆ ತಾವು ಹೆಚ್ಚು ಗಮನಹರಿಸಬೇಕೆಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. 1985ರಲ್ಲಿ ನಾರಾಯಯಣಭಟ್‌ರವರು ನೂರಾರು ಶಾಲೆಗಳಿಗೆ ಅನುಮತಿಯನ್ನು ಕೊಟ್ಟರು. ಆಗ ಇದು ಪ್ರಸ್ತಾಪವಾಯಿತು. ಸಂದರ್ಭದಲ್ಲಿ ಶ್ರಿಮತಿ ಮಾಲತಿದಾಸ್‌ರವರು ಸಿ.ಬಿ.ಐ. ಆಗಿದ್ದರು. ಅವರು ಈ ನಿರ್ದೇಶಕರನ್ನು ಸಸ್ಪೆಂಡ್ ಮಾಡಿದರು. ಸಸ್ಪೆಂಡ್ ಮಾಡಿದ ಮೇಲೆ ಈ ನಿರ್ದೇಶಕರು ಸತ್ತು ಹೋದರು. ಆದರೆ ಅವರು ಮಾಡಿರತಕ್ಕ ಅವ್ಯವಹಾದ ಬಗ್ಗೆ ತನಿಖೆಯಾಗಲಿಲ್ಲ. ಅವರು ತನಿಖೆಗೆ ಆಗಲೇ ಆರ್ಡರ್ ಮಾಡಿದ್ದಾರೆ. ಆ ತನಿಖೆ ಎಲ್ಲಿಗೆ ಬಂದಿದೆ ಎನ್ನತಕ್ಕದ್ದು ನನ್ನ ಉಪಪ್ರಶ್ನೆ. ಮತ್ತು ತಾವು ಹೇಳತಕ್ಕ ಪ್ರಥಮ ಹಂತದ ವಿಚಾರಣೆ ಮಾಡಲಾಗುತ್ತಿದೆ ಅನ್ನತಕ್ಕದ್ದು ಯಾವುದು, ಅದಕ್ಕೆ ರೂಪುರೇಷಗಳೇನು, ಯಾರ ಮುಖೇನ ತನಿಖೆ ಮಾಡಿಸುತ್ತಿದ್ದಾರೆನ್ನತಕ್ಕದ್ದನ್ನು ತಾವು ಹೇಳಬೇಕು.

ಶ್ರಿ ಎಂ. ವೀರಪ್ಪ ಮೊಯಿಲಿ: ಆಗಿನ ಸಿ.ಬಿ.ಐ ಅವರು ಈ ಪ್ರಕರಣದ ಬಗ್ಗೆ ಸಿಓಡಿ ತನಿಖೆಯಾಗಬೇಕೆಂದು ಸರ್ಕಾರಕ್ಕೆ ದಿನಾಂಕ 1-6-1990 ರಂದು ಪತ್ರ ಬರೆದಿದ್ದಾರೆ. ಸರ್ಕಾರ ಪುನ: ದಿನಾಂಕ 21-6-1990 ರಂದು ಪತ್ರ ಬರೆದು ಈ ಸಂಬಂಧಿತ ಸಂಸ್ಥೆಗಳು ಸುಳ್ಳು ಅನುಮತಿ ಪತ್ರ ಹೊಂದಿರುವ ಬಗ್ಗೆ ಇಲಾಖೆಯಿಂದ ಪೂರ್ವಭಾವಿ ತನಿಖೆ ನಡೆಸಬೇಕು ಮತ್ತು ಮೇಲ್ನೋಟಕ್ಕೆ ಅದು ದೃಢೀಕರಣವಾಗುವವರೆಗೆ ಸಿ.ಓ.ಡಿ. ಗೆ ವಹಿಸುವುದು ಬೇಡ, ಅನಂತರ ವಹಿಸಬಹುದು. ಎಂದು ಇಲಾಖೆಗೆ ಕಳುಹಿಸಿದರು. ಇಲಾಖೆಗೆ ಕಳುಹಿಸಿದ ನಂತರ ಸುಮಾರು 5-6 ಜಿಲ್ಲೆಗಳಲ್ಲಿ ತನಿಖೆಯಾಗಿದ್ದು ಕೆಲವು ಮಾಹಿತಿಗಳು ಕೂಡ ಬಂದಿವೆ. ನಮ್ಮ ಮೇಲ್ನೋಟಕ್ಕೆ ಬಂದಂಥ ವರದಿ ಪ್ರಕಾರ ತುಮಕೂರು, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಗ್ರಾಮಾಂತರಗಳಲ್ಲಿ ಇಂತಹ68 ಸಂಸ್ಥೆಗಳಿಗೆ ಸುಳ್ಳು ದಾಖಲೆಗಳ ಮೇಲೆ ಅನುಮತಿ ಕೊಟ್ಟ ಹಾಗೆ ಮಾಡಿದ್ದಾರೆ. ಈಗ ಎಲ್ಲಾ ಸಂಸ್ಥೆಗಳಿಗೆ ಎಲ್ಲಿ ಇಂತಹ ಜೋಟಾ ಅನುಮತಿ ಕೊಟ್ಟಿದ್ದಾರೆ, ಅವರ ದಸ್ಕತ್ತು ಅಲ್ಲದ್ದು ಎಂಬುದನ್ನು ನಾವು ಅನಧಿಕೃತ ಎಂದು ಟ್ರೀಟ್ ಮಾಡುತ್ತಿದ್ದೇವೆ. We are not acknowledging them as authorised. We are treating all of them as unauthorised. ಅವರಿಗೆ

ಅನುಮತಿ ಕೊಟ್ಟ ಹಾಗೆ ಆಗುವುದಿಲ್ಲ. Deems to have been not granted any permission. ನಾನು ಒಪ್ಪುತ್ತೇನೆ. ಏಕೆಂದರೆ ಇದೆಲ್ಲಾ ಆಮೆ ಹೆಚ್ಚೆಯಲ್ಲಿ ಈ ತನಿಖೆ ನಡೆದರೆ ಆಗುವುದಿಲ್ಲ. I have taken the decision to entrust it to the C.O.D, immediately. ಏಕೆಂದರೆ, ಬೇರೆ ಜಿಲ್ಲೆಗಳಿಂದ ವಿವರಗಳು ಬರಲು ಇನ್ನೂ ಎರಡು ವರ್ಷ ಹೋಗುತ್ತದೆ. ಆದುದರಿಂದ ತಕ್ಷಣ ಸಿ.ಓ.ಡಿ ಗೆ ವಹಿಸುತ್ತಿದ್ದೇವೆ. ಇದರಲ್ಲಿ ಯಾರ ಕೈವಾಡವಿದೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಈಗ ನಾರಾಯಣ ಭಟ್ಟರು ತೀರಿಕೊಂಡಿದ್ದಾರೆ. ನಮಗೆ ಬಂದ ವರ್ತಮಾನದ ಪ್ರಕಾರ ಅವರ ಹಸ್ತಾಕ್ಷರದಲ್ಲಿ ಪುನ: ಕೆಲವು ಸಮಯ ವ್ಯವಹಾರ ನಡೆದಿದೆಯೆಂದು ತಿಳಿದುಬಂದಿದೆ. ಆದುದರಿಂದ, ಇವರ ಬಗ್ಗೆ ತನಿಖೆಗಾಗಿ ಸಿ.ಓ.ಡಿ. ಗೆ ವಹಿಸುತ್ತಿದ್ದೇವೆ. ಮತ್ತು ಎಲ್ಲೆಲ್ಲಿ ಅವರ ಹೆಸರಿನಲ್ಲಿ ಸಹಿ ಮಾಡಿಕೊಟ್ಟಂಥ ಅನುಮತಿ ಇದೆಯೋ ಅದನ್ನೆಲ್ಲಾ ರದ್ದು ಮಾಡುತ್ತಿದ್ದೇವೆ. We are not treating them as permissions. All of them will be treated as unauthorised as in other cases.

ಶ್ರೀ ಟಿ. ಬಿ. ಜಯಚಂದ್ರ: ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರ ಉತ್ತರದಿಂದ ನನಗೆ ತೃಪ್ತಿಯಾಗಿದೆ. ತಾವು ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ ನಂತರ ವರದಿಯನ್ನು ನಿರ್ದಿಷ್ಟವಾಗಿ 2-3-4 ತಿಂಗಳೊಳಗೆ ತರಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಮತ್ತು ಅವರ ಹೆಸರಿನಲ್ಲಿ ಇಷ್ಟೂ ಆಗಿರತಕ್ಕಥ ಎನ್.ಓ.ಸಿ ಅಥವಾ ಮತ್ತೊಂದು ಯಾವುದೇಇರಲಿ, ಅದರ ಬಗ್ಗೆ ತಮ್ಮ ಹತ್ತಿರ ದಾಖಲೆ ಇರುವುದರಿಂದ, ಇದರ ಬಗ್ಗೆ ಸಂಕ್ಷಿಪ್ತವಾಗಿ ವಿಚಾರ ಮಾಡಿದರೆ ಸತ್ಯಾಂಶ ಏನೆಂಬುದು ಹೊರಗಡೆ ಬರುತ್ತದೆ. ಇದರಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆಂದರೆ, ಒಬ್ಬ ಶಿಕ್ಷಣಾಧಿಕಾರಿಗಳು ಸೇರಿದ್ದಾರೆ, ಒಬ್ಬ ಕೇಸ್ ವರ್ಕರ್ ಇದ್ದಾರೆ, ಅಲ್ಲದೆ ಇನ್ನೂ ಅನೇಕ ಜನರಿದ್ದಾರೆಂಬುದು ನಿಮಗೆ ತಿಳಿದ ಮಾಹಿತಿ ಪ್ರಕಾರ ಗೊತ್ತಾಗುತ್ತದೆ. ಇವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತೊಂದು ವಿಷಯವೇನೆಂದರೆ ಈ ಎನ್.ಓ.ಸಿ. ಕೊಡುವುದರ ಬಗ್ಗೆ ಈಗ ದೊಡ್ಡ ಜಾಲವೇ ನಡೆಯುತ್ತಿದೆ. ನೀವು ಇಷ್ಟೆಲ್ಲಾ ಆಡಳಿತ ಸುಧಾರಣೆ ಮಾಡಿದರೂ ಕೂಡ, ತಮ್ಮ ಕಾಲಕ್ಕೂ ಇದು ತಪ್ಪಿಲ್ಲ. ಬಹುಶ: ತಮಗೆ ಜ್ಞಾಪಕವಿರಬಹುದು. ಸಾರಕ್ಕಿ ಎಜುಕೇಷನ್ ಸೊಸೈಟಿ ಬಗ್ಗೆ ಅನೇಕ ಸಲ ತಮ್ಮ ಹತ್ತಿರ ಪ್ರಸ್ತಾಪಿಸತಕ್ಕಂಥ ಸಂದರ್ಭದಲ್ಲಿ ತಾವು ಅನುಮತಿ ಕೊಟ್ಟರೂ ಕೂಡ ಇವೊತ್ತು ಇಲಾಖೆಯಲ್ಲಿ ಹೋಗಿ ಒಬ್ಬ ಸೆಕ್ಷನ್ ಆಫೀಸರ್ ನೋಡಲಿಲ್ಲವೆನ್ನುವ ಕಾರಣಕ್ಕೋಸ್ಕರ ಫೈಲ್ ಅನ್ನು ತಮಗೆ ವಾಪಸ್ಸು ಕಳುಹಿಸಿಕೊಡುತ್ತಾರೆ. ದಯವಿಟ್ಟು , ಆ ಫೈಲನ್ನು ತರಿಸಿ ನೋಡಿ. ಇವೊತ್ತು ಇಲಾಖೆಯಲ್ಲಿ ತಮ್ಮ ಆದೇಶವನ್ನು ಯಾವ ರೀತಿ ಪರಿಪಾಲನೆ ಮಾಡುತ್ತಿದ್ದಾರೆ ಎನ್ನ ತಕ್ಕಂಥಾದ್ದು ತಮಗೇ ಗೊತ್ತಾಗುತ್ತದೆ. ಏಕೆಂದರೆ, ಇದಕ್ಕೆ ಹಿಂದೆ ಇರತಕ್ಕಂಥ vested interests ಇದರಿಂದ ಹೊರತಾಗಿಲ್ಲ. ಆದುದರಿಂದ, ಆಡಳಿತವನ್ನು ನಿಯಂತ್ರಿಸುವ ದೃಷ್ಟಿಯಿಂದ ಕೆಲವರನ್ನು ವರ್ಗಾಯಿಸತಕ್ಕಂಥಾದ್ದು ಉತ್ತಮ. ಇವೊತ್ತು ತಾವು ಸಾರಕ್ಕಿ ಎಜುಕೇಷನ್ ಸೊಸೈಟಿಯಿಂದ ಫೈಲ್ ಅನ್ನು ತರಿಸಿ, ಅದರಲ್ಲಿ ತಮ್ಮ ಆದೇಶವನ್ನು ಯಾವ ರೀತಿ ಉಲ್ಲಂಘನೆ ಮಾಡಿದ್ದಾರೆಂಬುದನ್ನು ನಾನು ತೋರಿಸುತ್ತೇನೆ. ಇದರಿಂದ ಸರ್ಕಾರದ ಕಣ್ಣಿಗೆ ಮಣ್ಣೆರಚತಕ್ಕಂಥಾದ್ದು ಗೊತ್ತಾಗುತ್ತದೆ. ಇಷ್ಟನ್ನು ಹೇಳುತ್ತಾ, ಇದನ್ನು ನಿರ್ದಿಷ್ಟವಾಗಿ ಇಷ್ಟು ದಿವಸಗಳಲ್ಲಿ ವಿಚಾರಣೆ ಮಾಡುತ್ತೇವೆ ಎನ್ನತಕ್ಕಂಥಾದ್ದರ ಬಗ್ಗೆ ಆಶ್ವಾಸನೆ ಕೊಡಬೇಕೆಂದು ತಮ್ಮಿಂದ ನೇರವಾಗಿ ಉತ್ತರ ಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಸದಸ್ಯರು ಹೇಳಿದ ಪ್ರಕಾರ ಸಾರಕ್ಕಿ ಎಜುಕೇಷನ್ ಸೊಸೈಟಿ ವಿಚಾರವಾಗಿ ನನಗೆ ಅಷ್ಟು ನೆನಪಿಲ್ಲ. ಆದರೂ ಫೈಲ್ ತರಿಸಿ ನೋಡುತ್ತೇನೆ. ಈಗ 5-6 ಜಿಲ್ಲೆಗಳಿಂದ ಈ ಬಗ್ಗೆ ಸಾಧಾರಣ ಮಾಹಿತಿ ಬಂದಿದೆ. ನಾರಾಯಣ ಭಟ್ಟರಿಗೆ ಒಂದಲ್ಲ ಒಂದು ರೀತಿಯಲ್ಲಿ ಶಿಕ್ಷೆ ಆಗಿದೆ. ಮತ್ತು ಉಳಿದವರು ಯಾವ ರೀತಿಯಲ್ಲಿ ಶಾಮೀಲಾಗಿದ್ದಾರೆ ಅಥವಾ ಒಳಪಟ್ಟಿದ್ದಾರೆ ಎನ್ನುವುದರ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದರೆ , ನಾನೇ ದಾಖಲೆ ತರಿಸಿ ಸ್ವತ: ನೋಡುತ್ತೇನೆ. ಮೇಲ್ನೋಟಕ್ಕೆ ಯಾರಾದರೂ ಅಂತಹ ತಪ್ಪು

ಮಾಡಿದ್ದರೆ ಅವರ ಮೇಲೆ ಕೂಡ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಅನಂತರ, ಇದರ ಬಗ್ಗೆ ಸಾಕಷ್ಟು ಎಲ್ಲಾ ಮಟ್ಟದಲ್ಲಿಯೂ ಕೂಡ ಆಡಳಿತವನ್ನು ಬಿಗಿಪಡಿಸುವುದಕ್ಕೆ ಮತ್ತು ಯಾವುದೇ ತರಹದ ತಪ್ಪು ಕೆಲಸ ಮಾಡಿದ್ದರೆ, ಅಂತಹವರ ಮೇಲೆ ಕಾರ್ಯಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಆದುದರಿಂದ ತಮ್ಮ ಈ ಶಂಕೆಗೆ ಅವಕಾಶವಿಲ್ಲ. ಯಾವುದೇ ರೀತಿಯಲ್ಲಿ ಎನ್.ಓ.ಸಿ.ಯನ್ನು ಬೇರೆ ಬೇರೆ ಹಂತಗಳಲ್ಲಿ ಕೊಡತಕ್ಕ ಪ್ರಶ್ನೆಯು ಉದ್ಭವವಾಗುವುದಿಲ್ಲ. ಕ್ಯಾಬಿನೆಟ್‌ನಲ್ಲಿ ಆಂಗ್ಲ ಮಾಧ್ಯಮ ಶಾಲೆಗಳಿಗೆ ಮಂಜೂರಾತಿಯನ್ನು ಕೊಡುವಲ್ಲಿ ಅನುಸರಿಸಬೇಕಾದ ನೀತಿ, ಸ್ವರೂಪದ ಬಗ್ಗೆ ಇನ್ನೂ ಕೂಡ ನಿರ್ಣಯವನ್ನು ತೆಗೆದುಕೊಳ್ಳದಿರುವುದರಿಂದ ಎನ್.ಓ.ಸಿ. ಯನ್ನು ಕೊಡತಕ್ಕ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ:- ಉಪಾಧ್ಯಕ್ಷರೇ ಎನ್.ಓ.ಸಿ. ಕೇಳಲು ಇರತಕ್ಕದ್ದು ಸೆಂಟ್ರಲ್ ಸಿಲಿಬಸ್‌ಗೆ ಮಾತ್ರ. ಸೆಂಟ್ರಲ್ ಸಿಲಿಬಸ್‌ಗೆ ಕೂಡ ರಾಜ್ಯ ಸರ್ಕಾರದವರು ಅಲ್ಲಿ ಸಂಸ್ಥೆ ಇದೆಯೋ ಅಥವಾ ಇಲ್ಲವೋ, ಅದು ಸರ್ಕಾದಿಂದ ಮಾನ್ಯತೆಯನ್ನು ಪಡೆದಿದೆಯೋ ಅಥವಾ ಇಲ್ಲವೋ ಎನ್ನತಕ್ಕದ್ದಕ್ಕೆ ಮಾತ್ರ ನೀವು ಕೊಡತಕ್ಕದ್ದು ಆದರೆ ಅಲ್ಲಿ ಶಾಲೆಯೇ ಇಲ್ಲ, ಅಂಥವುಗಳಿಗೆ ಅನುಮತಿಯನ್ನು ಕೊಟ್ಟರೆ ಹೇಗೆ? ಅಂದರೆ ಇವತ್ತು ನಾರಾಯಣಭಟ್ಟರ ಹೆಸರಿನಲ್ಲಿ ಯಾವುದೋ ದೆವ್ವ ಕುಳಿತುಕೊಂಡು ಆರ್ಡರನ್ನು ಮಾಡುತ್ತಿದೆ ಎನ್ನುವಂಥ ರೀತಿಯಲ್ಲಿ ಸರ್ಟಿಫಿಕೇಟ್ ಆಗುತ್ತಿದೆ. ಅಂಥವರಿಗೂ ಮಾನ್ಯತೆ ಸಿಗುತ್ತಿದೆ. ಅದು ಇವತ್ತು ಹಾಲಿ ನಡೆಯುತ್ತಿರತಕ್ಕದ್ದು. ಒಬ್ಬ ಹೈಕೋರ್ಟಿನ ನ್ಯಾಯಾಧೀಶರ ಹೆಸರಿನಲ್ಲಿರತಕ್ಕ ಇಂಥ ವಿದ್ಯಾ ಸಂಸ್ಥೆಗಳಿಗೆ ಅನುಮತಿಯನ್ನು ಕೊಡುವುದರಲ್ಲಿ ತಾರತಮ್ಯವಾಗುತ್ತಿದೆ ಎಂದು ನನ್ನ ಆಕ್ಷೇಪ. ಎನ್.ಓ.ಸಿ.ಯನ್ನು ಕೊಡಬೇಕಾದರೆ ಯಾವ ರೀತಿ ಕೊಡಬೇಕು ಎನ್ನುವುದರ ಬಗ್ಗೆ ಒಂದು ನಿರ್ದಿಷ್ಟವಾದ ರೂಲ್ಸ್ ಏನು ಇದೆ ಅದನ್ನು ತರಿಸಿಕೊಂಡು ನೋಡಿದರೆ ತಮಗೆ ಗೊತ್ತಾಗುತ್ತದೆ ಮತ್ತು ಇದಕ್ಕೆ ಒಂದು ದೊಡ್ಡ ಜಾಲವೇ ಇದೆ. ಆದುದರಿಂದ ಎನ್.ಓ.ಸಿ.ಯನ್ನು ಕೊಡಬೇಕಾದರೆ ಅಲ್ಲಿ ಶಾಲೆ ಇದೆಯೋ ಅಥವಾ ಶಾಲೆ ಇಲ್ಲವೋ ಎನ್ನುವುದನ್ನು ವಿಚಾರ ಮಾಡದೆ ದಯವಿಟ್ಟು, ತಾವು ಅನುಮತಿಯನ್ನು ಕೊಡಬಾರದು ಎನ್ನತಕ್ಕ ಮಾತನ್ನು ಹೇಳುತ್ತಾ ಇದಕ್ಕೆ ತಮ್ಮಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಉಪಾಧ್ಯಕ್ಷರೇ, ಆ ರೀತಿಯ ಯಾವ ಜಾಲವು ಕೂಡ ನಮ್ಮ ಮುಂದೆ ನಡೆಯುವುದಿಲ್ಲ. ಆ ಜಾಲವನ್ನು ಭೇದಿಸಿ ಏನು ಮಾಡಬೇಕೊ ಆ ಎಲ್ಲಾ ಕೆಲಸವನ್ನು ನಾವು ಮಾಡುತ್ತೇವೆ. ನಿಯಮವನ್ನು ಮೀರಿ ಯಾರಾದರೂ ಏನಾದರೂ ಮಾಡಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ವಿಷಯ:- ಬಸ್ಸುಗಳ ಮೇಲೆ ಕುಳಿತು ಪ್ರಯಾಣ ಮಾಡುವವರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 431 (2303)

ಶ್ರೀ ಬಾಬುರಾವ್ ಚವ್ಹಾಣ್ (ಶಹಬಾದ್):- ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಗುಲ್ಬರ್ಗ ಜಿಲ್ಲೆಯಲ್ಲಿ ಸರ್ಕಾರಿ ಬಸ್ಸುಗಳ ಮೇಲೆ ಕುಳಿತು ಜನರು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಸ್ಸುಗಳ ಮೇಲೆ ಪ್ರಯಾಣ ಮಾಡಲು ಕಾರಣಗಳೇನು?

ಇ ಬಸ್ಸುಗಳ ಮೇಲೆ ಜನರು ಕುಳಿತು ಪ್ರಯಾಣ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ? (ಈ ಮಾರ್ಗಗಳ ಹೆಸರುಗಳನ್ನು ತಿಳಿಸುವುದು)

ಶ್ರೀ ಅಜೀಜ್‌ಸೇಠ್, (ಸಾರಿಗೆ ಮತ್ತು ವಕ್ಫ್ ಸಚಿವರು)-

ಅ ಬಂದಿದೆ.

ಆ ಕೆಟ್ಟ ರಸ್ತೆಗಳ ಪರಿಸ್ಥಿತಿ ಮತ್ತು ವಾಹನ ಸಿಬ್ಬಂದಿಯ ಗೈರುಹಾಜರಿಯಿಂದಾಗಿ ಸಾರಿಗೆಗಳು ರದ್ದಾಗುತ್ತಿರುವುದರಿಂದ ಮತ್ತು ತಡವಾಗಿ ಸಂಚರಿಸುತ್ತಿರುವುದರಿಂದ.